ವಿಚಾರ ಲಹರಿ

# ನಿನ್ನೆ ನಾಳೆಗಳ ನಡುವೆ...

ಹೀಗೊಂದು ದೃಶ್ಯವನ್ನು ಕಲ್ಪಿಸಿಕೊಳ್ಳೋಣ: ಅಂಕು ಡೊಂಕಾಗಿರುವ ಒಂದು ಕಿರುದಾರಿ. ಅದರಲ್ಲಿ ಒಬ್ಬಾತ ವೇಗವಾಗಿ ನಡೆಯುತ್ತಿದ್ದಾನೆ. ದಾರಿಯ ಎರಡೂ ಬದಿಗಳಲ್ಲಿ ಸೊಂಪಾಗಿ ಬೆಳೆದಿರುವ ಮರ ಗಿಡ ಬಳ್ಳಿಗಳಿವೆ. ಅವುಗಳಲ್ಲಿ ಸುವಾಸನೆ ಸೂಸುವ ಆಕರ್ಷಕ ಹೂಗಳಿವೆ; ರಸಭರಿತ ಹಣ್ಣುಗಳಿವೆ; ಬಣ್ಣ ಬಣ್ಣದ ಪತಂಗಗಳು ಹಾರಾಡುತ್ತಿವೆ; ವಿವಿಧ ಪಕ್ಷಿಗಳು ಮಧುರವಾಗಿ ಹಾಡುತ್ತಿವೆ; ಎಳೆ ಬಿಸಿಲಿನಲ್ಲಿ ಹುಲ್ಲಿನೆಸಳ ಮೇಲಿನ ಹಿಮದ ಮಣಿ ಹೊಳೆಯುತ್ತಿದೆ; ಬೆಳಗಿನ ಗಾಳಿ ಹಿತವಾಗಿ ಬೀಸುತ್ತಿದೆ. ಇಷ್ಟಾದರೂ ಆ ದಾರಿ ಹೋಕ ಒಂದು ಕ್ಷಣವೂ ನಿಲ್ಲದೆ ಮುಂದೆ ಮುಂದೆ ಧಾವಿಸುತ್ತಲೇ ಇದ್ದಾನೆ. ಹಾದಿಯಲ್ಲಿನ ಹೂ ಹಣ್ಣುಗಳಾಗಲೀ, ಪತಂಗ ಪಕ್ಷಿಗಳಾಗಲೀ ಆತನ ಗಮನಕ್ಕೇ ಬರುತ್ತಿಲ್ಲ. ಆ ದಾರಿ ತನ್ನನ್ನು ಇನ್ನೂ ಚೆಲುವಾಗಿರುವ ಕಡೆಗೆ ಕರೆದೊಯ್ಯುವುದೆಂಬ ತುಡಿತ ಆತನದು. ಆದರೆ ಕೊನೆಗೂ ಆತ ತಲುಪಿದ್ದು ಭಣಗುಟ್ಟುವ ಮರುಭೂಮಿಯೊಂದಕ್ಕೆ!

ನಮ್ಮಂಥ ಜನ ಸಾಮಾನ್ಯರ ಪಾಡು ಇದಕ್ಕಿಂತ ಬೇರೆಯಲ್ಲ. ಬದುಕಿನ ಹಾದಿಯಲ್ಲಿ ಲಭ್ಯವಾಗುವ ಸುಖ ಸಂತೋಷದ ಗಳಿಗೆಗಳನ್ನು ಅನುಭವಿಸುವ ವ್ಯವಧಾನವಿಲ್ಲದೇ, ಯಾವುದೋ ಮರೀಚಿಕೆಯ ಬೆನ್ನು ಹತ್ತಿ, ನಾವು ಮುಂದೆ ಮುಂದೆ ಧಾವಿಸುತ್ತಲೇ ಇರುತ್ತೇವೆ. ಆದರೆ ನಮ್ಮ ನಿರೀಕ್ಷೆ ಹುಸಿಯಾಗುತ್ತದೆ. ನಾವು ಹಂಬಲಿಸಿದ ಸಂಗತಿ ಇನ್ನಷ್ಟು ದೂರ ಸರಿಯುತ್ತದೆ; ನಾವು ಸುಲಭವಾಗಿ ಅನುಭವಿಸಬಹುದಾಗಿದ್ದ ಬದುಕಿನ ದಿವ್ಯ ಕ್ಷಣಗಳು ಗತಕಾಲಕ್ಕೆ ಸರಿದಿರುತ್ತವೆ. ಹೀಗಾಗಿ ನಮ್ಮ ಜೀವನ ಹಂಬಲ– ಹಳ ಹಳಿಕೆ, ನಿರೀಕ್ಷೆ– ನಿರಾಸೆ– ಇಂಥ ವರ್ತುಲದಲ್ಲಿಯೇ ಸುತ್ತುತ್ತಿರುತ್ತದೆ. ಪರಿಣಾಮವಾಗಿ ನಾವು ನಿಜವಾದ ಅರ್ಥದಲ್ಲಿ ಬದುಕುವುದನ್ನೇ ಮರೆಯುತ್ತೇವೆ; ಭೂತ ಭವಿಷ್ಯತ್ ಕಾಲಗಳಿಗೇ ತಕ್ಕೆ ಬೀಳುವ ನಾವು ವರ್ತಮಾನವನ್ನು ಅಲಕ್ಷಿಸುತ್ತೇವೆ. ನಮ್ಮ ಗತ–ಆಗತಗಳ ನಡುವೆ 'ಪ್ರಸ್ತುತ' ಕಳೆದು ಹೋಗುತ್ತದೆ. ಕಳೆದು ಹೋದ ಕಾಲವನ್ನು ಕುರಿತು ಮೆಲುಕು ಹಾಕುವುದು, ಭವಿಷ್ಯದ ಬಗೆಗೆ ಕನಸು ಕಾಣುವುದು– ಇದು ಸಾಮಾನ್ಯ ಮನುಷ್ಯರೆಲ್ಲರ ಸ್ವಭಾವ. 'We look before and after and pine for what is not' ಎಂದು ಆಂಗ್ಲ ಕವಿ ಷೆಲ್ಲಿ ಹೇಳಿರುವ ಮಾತು ಮನುಷ್ಯರ ಈ ಪ್ರವೃತ್ತಿಯನ್ನು ಕುರಿತೇ. ಈ ಕ್ಷಣಕ್ಕೆ ಲಭ್ಯವಾಗುವ ಸಂತೋಷಕ್ಕೆ ಬೆನ್ನು ಹಾಕಿ, 'ಇರುವುದೆಲ್ಲ ಬಿಟ್ಟು, ಇರದುದರೆಡೆಗೆ' ನಮ್ಮ ಮನಸ್ಸು ಸದಾ ತುಡಿಯುತ್ತಿರುತ್ತದೆ. ಇದೇ ಬದುಕಿನ ಬಹುದೊಡ್ಡ ವಿಪರ್ಯಾಸ.

ಈ ಸಮಸ್ಯೆಯಿಂದ ಬಿಡುಗಡೆಗೊಳ್ಳುವುದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ನಾವು ಎಳೆಯ ಮಕ್ಕಳನ್ನು ಗಮನಿಸಬೇಕು. ಮಕ್ಕಳು ತಮಗೆ ಎದುರಾಗುವ ಎಲ್ಲವನ್ನೂ ವಿಸ್ಮಯದಿಂದ ನೋಡುತ್ತವೆ; ಕುತೂಹಲದಿಂದ ಪರೀಕ್ಷಿಸುತ್ತವೆ; ಅನ್ವೇಷಣೆಯ ಸುಖವನ್ನು ಅನುಭವಿಸುತ್ತವೆ. ಮಕ್ಕಳಿಗೆ ನಾಳಿನ ಚಿಂತೆ ಕಾಡುವುದಿಲ್ಲ. ಈ ಕ್ಷಣದ ಸಂತೋಷವನ್ನು ಅವು ಮುಕ್ತವಾಗಿ ತಮ್ಮದಾಗಿಸಿಕೊಳ್ಳುತ್ತವೆ. 'ಆನಂದಮಯ ಈ ಜಗ ಹೃದಯ, ಏತಕೆ ಭಯ ಮಾಣೋ' ಎಂದು ಕವಿ ಕುವೆಂಪು ಉದ್ಗರಿಸಿರುವುದು ಇಂಥ ಶಿಶು ಸಹಜ ಮನಸ್ಸಿನಿಂದ ಎಂದರೆ ತಪ್ಪಲ್ಲ.

ಎಲ್ಲರಿಗೂ ಗೊತ್ತಿರುವ, ಆದರೆ ಬಹುಮಂದಿ ನೆನಪು ಮಾಡಿಕೊಳ್ಳಲು ಇಷ್ಟಪಡದೇ ಇರುವ ಒಂದು ಸತ್ಯವೆಂದರೆ ನಮ್ಮೆಲ್ಲರ ಬದುಕೂ ಶಾಶ್ವತವಲ್ಲವೆಂಬುದು. ನಿಜ ಹೇಳಬೇಕೆಂದರೆ ಈ ಸತ್ಯ ನಮ್ಮನ್ನು ಕಂಗೆಡಿಸಬೇಕಾಗಿಲ್ಲ. ಬದುಕೆಂಬುದು ಸೀಮಿತ ಅವಧಿಯದು ಎಂಬ ಅರಿವಿನಿಂದಾಗಿ ನಾವು ಈ ಪ್ರಪಂಚವನ್ನು ಇನ್ನಷ್ಟು ಗಾಢವಾಗಿ ಪ್ರೀತಿಸುತ್ತೇವೆ; ಬೊಗಸೆಯಲ್ಲಿ ಜಾರಿಹೋಗುವ ಬದುಕಿನ ಸುಖದ ಕ್ಷಣಗಳನ್ನು ಆಸ್ವಾದಿಸಬೇಕೆಂಬ ತುಡಿತ ನಮ್ಮಲ್ಲುಂಟಾಗುತ್ತದೆ. 'The way to love anything is to realise that it might be lost' ಎಂಬ ಚೆಸ್ಟರ್‌ಟನ್ ಅವರ ಮಾತು ಇದನ್ನೇ ಸಮರ್ಥಿಸುತ್ತದೆ.

ಇಷ್ಟಾದರೂ ಕಳೆದ ನಿನ್ನೆಯ ಬಗ್ಗೆ, ಬರುವ ನಾಳೆಯ ಬಗ್ಗೆ ನೆನಪು ಕನಸುಗಳನ್ನು ಇರಿಸಿಕೊಳ್ಳಬಾರದೆಂದು ಭಾವಿಸಲಾಗದು. ನಿನ್ನೆಯ ಅನುಭವದ ಬೆಳಕಿನಲ್ಲಿ ನಾಳಿನ ನಿರೀಕ್ಷೆಯನ್ನು ಹೊತ್ತು ಈ ದಿನ ಸ್ಥಿರವಾದ ಹೆಜ್ಜೆಯಿಡುತ್ತಾ ಬದುಕಿನ ದಾರಿಯಲ್ಲಿ ಪಯಣಿಸಬೇಕು!

■ ವೈನತೇಯ

## ಮಾತೇ ಮುತ್ತು

★ ಅಕ್ಕಿ ಆಗದಿದ್ದರೂ ಭತ್ತವನ್ನು ಕುಟ್ಟಿ ಆಯಾಸವನ್ನು ಪಟ್ಟುಕೊಳ್ಳುವುದರಿಂದ ಪ್ರಯೋಜನವೇನು?

-ಚೂಡಾಮಣಿ

★ ಧರ್ಮ ಇಲ್ಲದವರು ಪಶುವಿಗೆ ಸಮಾನ.

-ಹಿತೋಪದೇಶ

★ ಕಮ್ಯುನಿಸಂ ಎಂದರೆ ಪ್ರೀತಿ ಅಲ್ಲ. ಅದು ಒಂದು ಸುತ್ತಿಗೆ. ಅದರಿಂದ ನಾವು ವಿರೋಧಿಗಳನ್ನು ಸದೆ ಬಡಿಯುತ್ತೇವೆ.

-ಮಾವೊ ತ್ಸೆ ತುಂಗ್

★ ನಾವು ಅಪೇಕ್ಷಿಸುವಂತೆ ಬದುಕುವುದಿಲ್ಲ. ಸಾಧ್ಯವಿರುವಂತೆ ಬದುಕುತ್ತೇವೆ.

-ಮಿನಾಂಡರ್

★ ಸ್ವಾರ್ಥಕ್ಕಾಗಿ ಆದರ್ಶಗಳನ್ನು ಬಲಿಕೊಡುವುದು ಹೇಯಕರ.

-ಲೋಕೋಕ್ತಿ

★ ಆತ್ಮವಿಶ್ವಾಸವನ್ನು ಕಳೆದುಕೊಂಡವನು ಎಲ್ಲವನ್ನೂ ಕಳೆದು ಕೊಂಡಂತೆಯೇ ಸರಿ.

-ಗೋಥೆ

★ ಮರದಿಂದ ಮಾಡಿದ ಆನೆ, ಚರ್ಮದಿಂದಾದ ಮೃಗ, ಓದದೇ ಇರುವ ಮನುಷ್ಯ ಇವರೆಲ್ಲರೂ ಹೆಸರಿಗೆ ಮಾತ್ರ.

-ಮನುಸ್ಮೃತಿ

★ ಪ್ರಪಂಚ ನನಗಾಗಿ ಇದೆ, ನಾನು ಪ್ರಪಂಚಕ್ಕಾಗಿ ಇಲ್ಲ.

-ಸ್ವಾಮಿ ವಿವೇಕಾನಂದ

★ ದೇವರು, ಗುರು, ಧರ್ಮ ಎಂದು ಹೇಗೋ ಹೆಸರಿಟ್ಟರೆ ಅದನ್ನೇ ನೀನು ನಂಬಿಕೊಳ್ಳಬೇಡ. ವಿಮರ್ಶಿಸಿ ಪರೀಕ್ಷಿಸಿ ಅನಂತರದಲ್ಲಿ ಅವನ್ನು ನಂಬು.

-ಧರ್ಮಪರೀಕ್ಷೆ

★ ಕುತೂಹಲ, ಆಸಕ್ತಿಗಳು ಚೈತನ್ಯದಾಯಕವಾದ ಬುದ್ಧಿಯ ಖಚಿತ ಗುಣ.

-ಸ್ಯಾಮ್ಯುಯಲ್ ಜಾನ್ಸನ್

★ ನಿಜವಾದ ಸಂಪತ್ತು ಮದನವನ್ನು ಉಂಟು ಮಾಡುವುದಿಲ್ಲ. ಸುಖಿಯಾಗಿರಬೇಕು ಎಂದರೆ ಆಸೆ ಬಿಡಬೇಕು. ವಿಶ್ವಾಸ ಉಳ್ಳವನೇ ನಿಜವಾದ ಮಿತ್ರನು. ಜಿತೇಂದ್ರಿಯನೇ ನಿಜವಾದ ಪುರುಷನು.

-ಗರುಡ ಪುರಾಣ

★ ಗುಲಾಮಗಿರಿಗೆ ಬಲಿಯಾಗಿ ಅಗೌರವದಿಂದ ಬಾಳುವುದಕ್ಕಿಂತ, ಗೌರವವಾಗಿ ಬದುಕಲು ಹೋರಾಡಿ ಸಾಯುವುದೇ ಲೇಸು.

-ಎಮಿಲೈನ್ ಪ್ಯಾಂಕ್ ಹರ್ಸ್ಟ್

★ ಮನಸ್ಸಿನ ನೆಮ್ಮದಿಗಾಗಿಯಾದರೂ ನೇರ ದಾರಿಯಲ್ಲಿ ಹೋಗುವ ಪ್ರತಿಜ್ಞೆ ಮಾಡಿ.

-ಲಾಯಿಡ್ ಸಿ.ಡಗ್ಲಾಸ್

★ ಜಗತ್ತು ಮಲಗಿ ನಿದ್ರಿಸಲು ಅನುವಾಗಿರುವ ತೊಟ್ಟಿಲು ಅಲ್ಲ ಎಂಬುದು ಅನುಭವದಿಂದ ತಿಳಿದುಬರುವುದೇ ಹೊರತು ಮತ್ತೊಬ್ಬರ ಉಪದೇಶದಿಂದ ಅಲ್ಲ.

-ಸಿಗ್ಮಂಡ್ ಫ್ರಾಯ್ಡ್

★ ಸ್ನೇಹಿತರಲ್ಲಿ ಹಣ ಸಾಲ ಪಡೆಯುವವರು ಸ್ನೇಹವನ್ನೇ ಮಾರಾಟ ಮಾಡಿಬಿಟ್ಟಿರುತ್ತಾರೆ.

-ಷೇಕ್ಸ್‌ಪಿಯರ್

★ ಓಡುವ ಸ್ಪರ್ಧೆಯಲ್ಲಿ ಸ್ಪರ್ಧಾತ್ಮಕವಾಗಿ ಓಡುವ ಕುದುರೆಗಳು ಜೊತೆಗಿರುವುದರಿಂದಲೇ, ಒಂದು ಕುದುರೆಯು ವೇಗದಿಂದ ಓಡಿ ಜಯಗಳಿಸುವುದು.

-ಓವಿಡ್